**SC No.39 /2024**
**PW-1**
**CW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **39/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅನಿತಾ ಪ್ರಕಾಶ ಪರಮೋಜಿ | ಪ್ರಾಸಾ: 1 |
| ಗಂಡನ ಹೆಸರು | : | ಪ್ರಕಾಶ ಮಾರುತಿ ಪರಮೋಜಿ | ಚಾಸಾ: 1 |
| ವಯಸ್ಸು | : | 51 ವರ್ಷ | ದಿನಾಂಕ : 17.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಸರಸ್ವತಿ ನಗರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-5 ನನ್ನ ಗಂಡ. ಚಾಸಾ-6 ಮತ್ತು 7 ನನ್ನ ಮಕ್ಕಳು. ಚಾಸಾ-8 ನನ್ನ ಮಗಳು. ಮೃತ ಪ್ರಿಯಾಂಕಾ ಕೆಲಸ ಮಾಡುತ್ತಿದ್ದ ಅಂಗಡಿಯ ಮಾಲೀಕ. ಚಾಸಾ-2 ನನ್ನ ಮಗಳು ಪ್ರಿಯಾಂಕಾ ವಾಸ ಮಾಡುತ್ತಿದ್ದ ಮನೆಯ ಮಾಲೀಕ. ನನಗೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯವಿದೆ.

2. ನನ್ನ ಮಗಳು ಪ್ರಿಯಾಂಕಾಳ ಮದುವೆ ಈಗ್ಗೆ ಸುಮಾರು 12 ವರ್ಷಗಳ ಹಿಂದೆ ಬೊಂಬರ್ಗಾ ಗ್ರಾಮದ ವಿನೋದ ಬಿರ್ಜೆ ಎನ್ನುವವನೊಂದಿಗೆ ಆಗಿತ್ತು. ಆ ಮದುವೆಯಿಂದ ನನ್ನ ಮಗಳಿಗೆ ಪ್ರಣವ ಮತ್ತು ವೈದೆಹಿ ಎನ್ನುವ ಎರಡು ಮಕ್ಕಳಾಗಿದ್ದರು. ನನ್ನ ಅಳಿಯ ವಿನೋದ ಅನಾರೋಗ್ಯದ ಕಾರಣ 2018ನೇ ಸಾಲಿನಲ್ಲಿ ತೀರಿಕೊಂಡಿದ್ದರು. ಆ ಕಾಲಕ್ಕೆ ನನ್ನ ಮಗಳು ಗರ್ಭಿಣಿ ಇದ್ದ ಕಾರಣ ನಮ್ಮ ಮನೆಗೆ ಬಂದಿದ್ದು, ಮಗುವಿನ ಜನನವಾದ ನಂತರ ಆಕೆ ಗಣಪತಿ ಗಲ್ಲಿಯಲ್ಲಿರುವ ಚಾಸಾ-8 ರವರು ಬಟ್ಟೆ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದಳು. ಆ ಕಾಲಕ್ಕೆ ಆಕೆ ಮತ್ತು ಈ ಆರೋಪಿಯ ನಡುವೆ ಪರಿಚಯವಾಗಿ ಅವರ ನಡುವೆ ಪ್ರೇಮ ಉಂಟಾಗಿತ್ತು. ಆರೋಪಿ ಮತ್ತು ನನ್ನ ಮಗಳು ತಾವು ಮದುವೆಮಾಡಿಕೊಳ್ಳುತ್ತೇವೆ ಎಂದು ಹೇಳಿದಾಗ ಆರೋಪಿಗೆ ಈಗಾಗಲೇ ಬೇರೆ ಮದುವೆಯಾಗಿ 3 ಮಕ್ಕಳಿರುವ ಕಾರಣ ನಾವು ನನ್ನ ಮಗಳ ಮದುವೆಯನ್ನು ಆರೋಪಿಯೊಂದಿಗೆ ಮಾಡಲು ಒಪ್ಪಿ ರಲಿಲ್ಲ. ಆ ಕಾರಣಕ್ಕಾಗಿ ನಮ್ಮ ಮನೆಯಲ್ಲಿ ಜಗಳವಾಗಿ ಆ ನಂತರ ನನ್ನ ಮಗಳು ಪ್ರಿಯಾಂಕಾ ಆರೋಪಿಯೊಂದಿಗೆ ಯಮನಾಪೂರದಲ್ಲಿ ವಾಸಮಾಡತೊಡಗಿದಳು.

3. ಈಗ್ಗೆ ಸುಮಾರು 7-8 ತಿಂಗಳುಗಳ ಕಾಲ ಅವರು ಒಟ್ಟಿಗೆ ಇದ್ದು, ಆ ನಂತರ ನನ್ನ ಮಗಳು ಮತ್ತು ಆರೋಪಿಯ ನಡುವೆ ಜಗಳವಾಗಿ ನನ್ನ ಮಗಳು ಪ್ರಿಯಾಂಕಾ ನಮ್ಮ ಮನೆಗೆ ವಾಪಸ್ಸು ಬಂದಳು. ಈ ರೀತಿ ಬಂದವಳು ನಮ್ಮ ಬಳಿ ಇನ್ನುಮುಂದೆ ನಾನು ತಪ್ಪು ಮಾಡಲ್ಲ ಎಂದು ಹೇಳಿ ನಮ್ಮ ಮನೆಯಲ್ಲಿಯೇ ವಾಸಿಸುತ್ತಿದ್ದಳು. ಆ ಕಾಲಕ್ಕೆ ಆಕೆಯ ಇಬ್ಬರು ಮಕ್ಕಳು ಯಮನಾಪೂರದಲ್ಲಿ ಓದುತ್ತಿದ್ದುದ್ದರಿಂದ ಆಕೆ ಪುನಃ ಯಮನಾಪೂರಕ್ಕೆ ವಾಸಮಾಡಲು ಹೋದಳು. ಅಲ್ಲಿ ಸುಮಾರು 4 ತಿಂಗಳುಗಳ ಕಾಲ ಇದ್ದು, ಮಕ್ಕಳ ಶಾಲೆ ಮುಗಿದ ನಂತರ ಆಕೆ ಬೆಳಗಾವಿಯ ವಿನಾಯಕ ನಗರದಲ್ಲಿ ಚಾಸಾ-2 ರವರ ಮನೆಯಲ್ಲಿ ಬಾಡಿಗೆಗೆ ಇದ್ದಳು. ಆಕೆ ತನ್ನ ಮಗಳನ್ನು ಕನ್ನಡ ಶಾಲೆಗೆ ಸೇರಿಸಿದ್ದಳು. ಈಗ್ಗೆ ಸುಮಾರು 4-5 ತಿಂಗಳು ಆದ ನಂತರ ನನಗೆ ಆರಾಮ ಇಲ್ಲದ ಕಾರಣ ಫಿಜಿಯೋತೆರಪಿ ಚಿಕಿತ್ಸೆ ಪಡೆಯಲು ಹೋಗಿದ್ದು, ಆ

ನಂತರ ನನ್ನ ಮೊಮ್ಮಕ್ಕಳನ್ನು ನೋಡಲು ವಿನಾಯಕ ನಗರದ ನನ್ನ ಮಗಳ ಬಾಡಿಗೆ ಮನೆಗೆ ಹೋಗಿದ್ದೇನು. ಆ ಕಾಲಕ್ಕೆ ಆರೋಪಿಯು ಆ ಮನೆಯಲ್ಲಿ ಇದ್ದನು. ನಾನು ನನ್ನ ಮಗಳು ಮತ್ತು ಆರೋಪಿಯ ಬಳಿ ಪುನಃ ಯಾಕೆ ಆರೋಪಿಯು ಆಕೆಯೊಂದಿಗೆ ಇರುತ್ತಾನೆ ಎಂದು ಕೇಳಿದ್ದೇನು. ಆರೋಪಿಯು ಆಗ ಮನೆಯಿಂದ ಓಡಿ ಹೋಗಿದ್ದು, ನನ್ನ ಮಗಳು ನನ್ನ ಬಳಿ ಇನ್ನೊಮ್ಮೆ ಆ ರೀತಿ ಮಾಡುವುದಿಲ್ಲ ಎಂದು ಹೇಳಿದಳು. ನಾನು ಮೊಮ್ಮಕ್ಕಳನ್ನು ಕರೆದುಕೊಂಡು ನಮ್ಮ ಮನೆಗೆ ಬಂದೆನು ಮತ್ತು ಆ ಬಳಿಕ ನನ್ನ ಮಗಳು ಪ್ರಿಯಾಂಕಾ ಕೂಡ ನಮ್ಮ ಮನೆಗೆ ಬಂದಿದ್ದಳು. ಈ ರೀತಿ ಬಂದವಳು 2023ನೇ ಸಾಲಿನ ಆಗಸ್ಟ 28ನೇ ತಾರೀಖಿನಿಂದ ಸೆಪ್ಟೆಂಬರ್ 4ನೇ ತಾರೀಖಿನವರೆಗೆ ನಮ್ಮ ಮನೆಯಲ್ಲಿಯೇ ಇದ್ದಳು. ದಿಃ 04.09.2023 ರಂದು ನನ್ನ ಮಗಳು ಪ್ರಿಯಾಂಕಾ ಮಕ್ಕಳನ್ನು ಶಾಲೆಗೆ ಕಳುಹಿಸಿ ತಾನು ಕೆಲಸಕ್ಕೆ ಬಟ್ಟೆ ಅಂಗಡಿಗೆ ಹೋದಳು. ಆಕೆ ಅದೇ ದಿನ ರಾತ್ರಿ ನನಗೆ ಪೋನ್ ಮಾಡಿ ತಾನು ಮಾರನೇ ದಿನ ರೇಷನ್ ಕಾರ್ಡ ಮಾಡಿಸಲು ಬೊಂಬರ್ಗಾ ಗ್ರಾಮಕ್ಕೆ ಹೋಗುವುದಾಗಿ ತಿಳಿಸಿದ್ದಳು. ರಾತ್ರಿ ಸುಮಾರು 10-45 ಗಂಟೆಗೆ ನನ್ನ ಮಗಳು ಬಾಡಿಗೆಗೆ ಇದ್ದ ಮನೆಯ ಮಾಲೀಕರು ಪೋನ್ ಮಾಡಿ ನನ್ನ ಮಗಳು ನೇಣು ಹಾಕಿಕೊಂಡಿದ್ದಾಳೆ ಬನ್ನಿ ಎಂದು ಕರೆದರು. ಆ ಬಳಿಕ ನಾನು ನನ್ನ ಗಂಡ ಮತ್ತು ಇಬ್ಬರು ಮಕ್ಕಳು ಸೇರಿ ಆ ಬಾಡಿಗೆ ಮನೆಗೆ ಹೋದೆವು. ನಾವು ಹೋದಾಗ ಆ ಮನೆಯ 2 ಬಾಗಿಲು ಮುಚಿತ್ತು. ನಾವು ಆ ಮನೆಯ ಅಡುಗೆ ಕೋಣೆಯ ಕಿಟಕಿಯಿಂದ ನೋಡಿದಾಗ ನನ್ನ ಮಗಳು ನೇಣು ಹಾಕಿಕೊಂಡು ನೇತಾಡುತ್ತಿದ್ದುದು ಕಂಡು ಬಂತು. ಆ ಕಾಲಕ್ಕೆ ಅಲ್ಲಿ ನಾನು, ನನ್ನ ಗಂಡ, ಚಾಸಾ-2 ಮತ್ತು ಆ ಮನೆಯ ಅಕ್ಕ ಪಕ್ಕದವರು ಇದ್ದರು. ಚಾಸಾ-2 ರವರು ನಮ್ಮ ಬಳಿ ಆತನಿಗೆ ನನ್ನ ಮಗಳು ಕೆಲಸಕ್ಕಿದ್ದ ಅಂಗಡಿಯ ಮಾಲೀಕರಾದ ಚಾಸಾ-8 ರವರು ಪೋನ್ ಮಾಡಿ ನನ್ನ ಮಗಳು ಏನಾದರು ಮಾಡಬಹುದು ಮತ್ತು ಆಕೆಯ ಬಗ್ಗೆ ಗಮನ ಕೊಡಿ ಎಂದು ಹೇಳಿದ್ದರು ಎಂದು ಹೇಳಿದರು. ಚಾಸಾ-2 ರವರು ನಮ್ಮ ಬಳಿ ಪ್ರಿಯಾಂಕಾ ಪೋನಿನಲ್ಲಿ ಒಬ್ಬ ವ್ಯಕ್ತಿಯೊಂದಿಗೆ ಕನ್ನಡದಲ್ಲಿ ಜೋರಾಗಿ ಮಾತನಾಡುತ್ತಿದ್ದರು ಎಂದು ಹೇಳಿದರು.

4. ರಾತ್ರಿ 1-00 ಗಂಟೆಯ ಸುಮಾರಿಗೆ ಪೋಲಿಸರು ಬಂದಿದ್ದರು. ಪೋಲಿಸರು ಮನೆಯ ಬಾಗಿಲನ್ನು ಒಡೆದು ತೆಗೆದು ಒಳಗೆ ಹೋಗಿದ್ದರು. ಆ ಬಳಿಕ ಪೋಲಿಸರು ನನ್ನ ಮಗಳ ಶವವನ್ನು ಕೆಳಗೆ ಇಳಿಸಿದರು. ನಾನು ನನ್ನ ಮಗಳ ಶವವನ್ನು ನೋಡಿದಾಗ ಆಕೆಯ ನಾಲಿಗೆ ಹೊರಗಡೆ ಬಂದಿತ್ತು. ಮೂಗಿನಿಂದ ಸಿಂಬಳ ಮತ್ತು ಬಾಯಿಯಿಂದ ಜೊಲ್ಲೆ ಬಂದಿತ್ತು. ನನ್ನ ಮಗಳು ಓಡ್ನಿಯಿಂದ ನೇಣು ಹಾಕಿಕೊಂಡಿದ್ದಳು. ಪೋಲಿಸರು ಬಳಿಕ ಸ್ಥಳದಲ್ಲಿ ಒಂದು ಪಂಚನಾಮೆಯನ್ನು ರಾತ್ರಿ 2-00 ಗಂಟೆಯಿಂದ ಬೆಳಿಗ್ಗೆ 4-00 ಗಂಟೆಯವರೆಗೆ ಮಾಡಿದ್ದರು. ಪೋಲಿಸರು ಸ್ಥಳದಲ್ಲಿಯೇ ನನ್ನ ವಿಚಾರಣೆಯನ್ನು ಮಾಡಿದ್ದರು. ಆ ದಿನ ನನ್ನ ಮಗಳು ಚಾಕಲೇಟ್ ಬಣ್ಣದ ಚೂಡಿದಾರವನ್ನು ಧರಿಸಿದ್ದಳು. ಆಕೆಯ ಕೈಯಲ್ಲಿ ಒಂದು ಕೆಂಪು ದಾರ ಇತ್ತು. ಆಕೆಯ ಕೈ ಮೇಲೆ ತನ್ನ ಗಂಡನ ಹೆಸರಾದ ವಿನೋದ ಎನ್ನುವ ಟ್ಯಾಟೋ ಹಾಕಿದ್ದಳು.

5. ಆ ಬಳಿಕ ಪೋಲಿಸರು ಮಗಳ ಶವವನ್ನು ಬೆಳಗಾವಿಯ ಸಿವಿಲ್ ಆಸ್ಪತ್ರೆಗೆ ಕಳುಹಿಸಿದ್ದರು. ಅಲ್ಲಿ ಶವ ಪಂಚನಾಮೆ ಆದ ನಂತರ ಪೋಲಿಸರು ಶವವನ್ನು ನಮಗೆ ಕೊಟ್ಟಿದ್ದರು. ದಿಃ 09.09.2023 ರಂದು ನಾವು ನಮ್ಮ ಮಗಳ ಬಾಡಿಗೆ ಮನೆಗೆ ಹೋದಾಗ ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಬೇರೊಂದು ವ್ಯಕ್ತಿಯೊಂದಿಗೆ ಪೋನಿನಲ್ಲಿ ಕನ್ನಡದಲ್ಲಿ ಮಾತನಾಡಿ ಬೈಯುತ್ತಿದ್ದಳು ಎಂದು ಹೇಳಿದರು. ನನ್ನ ಮಗಳು ಈ ರೀತಿ ಪೋನಿನಲ್ಲಿ ಮಾತನಾಡಿದ ವ್ಯಕ್ತಿ ಈ ಆರೋಪಿಯೆಂದು ನಮಗೆ ತಿಳಿಯಿತು. ಆ ಬಳಿಕ ನಾನು ದಿಃ 10.09.2023 ರಂದು ಆರೋಪಿಯ ವಿರುದ್ದ ಪಿರ್ಯಾದಿಯನ್ನು ಕೊಟ್ಟಿದ್ದೇನು. ಆ ಪಿರ್ಯಾದಿಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿದೆ.

6. ಆ ಬಳಿಕ ಪೋಲಿಸರು ಪಂಚನಾಮೆ ಮಾಡುವ ಸಲುವಾಗಿ ನಮ್ಮ ಮಗಳು ಆತ್ಮಹತ್ಯೆ ಮಾಡಿಕೊಂಡ ಮನೆಗೆ ಬಂದಿದ್ದರು. ನಾನು ಪೋಲಿಸರಿಗೆ ಸ್ಥಳವನ್ನು ತೋರಿಸಿದ್ದು, ಆ ಪ್ರಕಾರ ಅವರು ಅಲ್ಲಿ ಒಂದು ಪಂಚನಾಮೆಯನ್ನು ಮಾಡಿದ್ದರು. ಆ ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿದೆ. ನನ್ನ ಮಗಳು ಮನೆಯ ಅಡುಗೆ ಕೊನೆಯ ತೊಲೆಗೆ ಇದ್ದ ಹುಕ್ಕಿಗೆ ಓಢ್ನಿಯಿಂದ ಕಟ್ಟಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಆ ಓಢ್ನಿಯ ತುಂಡು ಅಲ್ಲಿಯೇ ಇದ್ದು, ಅದನ್ನು ಪೋಲಿಸರು ತೆಗೆದುಕೊಂಡು ಹೋಗಿದ್ದರು. ಆ ಪಂಚನಾಮೆಯ ಕಾಲಕ್ಕೆ ಪೋಲಿಸರು ಒಂದು ಪೋಟೊವನ್ನು ತೆಗೆದಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಗಿದೆ. ಆ ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು 3 ರವರು ಇದ್ದರು. ಪೋಲಿಸರು ಅಮಾನತ್ತು ಪಡಿಸಿಕೊಂಡ ಓಢ್ನಿಯ ತುಂಡನ್ನು ನಾನು ಗುರುತಿಸುತ್ತಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಗಿದೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎ. ವಿ. ಎನ್. ವಕೀಲರಿಂದಃ

7. ನನ್ನ ಮಗಳು ಚಾಸಾ-8 ರವರು ಬಟ್ಟೆ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಆರೋಪಿಯನ್ನು ನನ್ನ ಮಗಳು ಪ್ರಿಯಾಂಕಾ ಮದುವೆ ಮಾಡುತ್ತೇನೆ ಎಂದು ಹೇಳಿದಾಗ ನಾವು ಅದಕ್ಕೆ ಒಪ್ಪಿರಲಿಲ್ಲ. ಆ ಕಾರಣಕ್ಕಾಗಿ ನಮ್ಮ ಮನೆಯಲ್ಲಿ ಜಗಳವಾಗಿ ನಮ್ಮ ಮಗಳು ಮನೆ ಬಿಟ್ಟು ಹೋಗಿದ್ದಳು. ನಮ್ಮ ಮಗಳು ಈ ಆರೋಪಿಯನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿದಾಗ ನಾವೇ ಆಕೆಯನ್ನು ಮನೆಯಿಂದ ಹೊರಗಡೆ ಹಾಕಿದ್ದೇವು ಎನ್ನುವುದು ನಿಜವಲ್ಲ. ಯಮನಾಪೂರದಲ್ಲಿ ನಮ್ಮ ಮಗಳು ಯಾರ ಮನೆಯಲ್ಲಿ ಇದ್ದಳು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆಕೆ ನಮ್ಮೊಂದಿಗೆ ಜಗಳ ಮಾಡಿ ಹೋಗಿದ್ದ ಕಾರಣ ನಾವು ಈ ಬಗ್ಗೆ

ಯಾವುದೇ ವಿಚಾರಣೆ ಮಾಡಿರಲಿಲ್ಲ. ಯಮನಾಪೂರದಲ್ಲಿ ಸುಮಾರು 7-8 ತಿಂಗಳು ಇದ್ದು ಆ ನಂತರ ನಮ್ಮ ಮಗಳು ಪ್ರಿಯಾಂಕಾ ಪುನಃ ನಮ್ಮ ಮನೆಗೆ ಬಂದಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಯಮನಾಪೂರದಲ್ಲಿ ನಮ್ಮ ಮಗಳು ಯಾವುದೇ ತೊಂದರೆ ಇಲ್ಲದೇ ವಾಸಮಾಡಿಕೊಂಡಿದ್ದರೂ ಕೂಡ ನಾವು ಆಕೆಗೆ ಆಗಾಗ ಪೋನ್ ಮಾಡಿ ತೊಂದರೆ ಕೊಡುತ್ತಿದ್ದೇವು ಎನ್ನುವುದು ನಿಜವಲ್ಲ. ಯಮನಾಪೂರದಲ್ಲಿ ಮೊದಲು 8 ತಿಂಗಳುಗಳ ಕಾಲ ಇದ್ದು ಆಕೆ ಪುನಃ ನಮ್ಮ ಮನೆಗೆ ಬಂದು ನಂತರ ಪುನಃ 4 ತಿಂಗಳುಗಳ ಕಾಲ ಯಮನಾಪೂರದಲ್ಲಿ ಇದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಯಮನಾಪೂರದಲ್ಲಿ ನನ್ನ ಮಗಳ ಒಬ್ಬ ಮಗಳು ಅಂಗನವಾಡಿಗೆ ಮತ್ತು ಇನ್ನೊಬ್ಬಳು ಆಂಗ್ಲ ಮಾಧ್ಯಮ ಶಾಲೆಗೆ ಹೋಗುತ್ತಿದ್ದರು. ಈ ರೀತಿ ಪುನಃ ಯಮನಾಪುರದಕ್ಕೆ ಹೋದ ನನ್ನ ಮಗಳು ಪ್ರಿಯಾಂಕಾ ಅಲ್ಲಿ ಯಾರ ಮನೆಯಲ್ಲಿ ಇದ್ದಳು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ದೊಡ್ಡ ಮಗಳು ಒಮ್ಮೆ ಯಮನಾಪೂರಕ್ಕೆ ಹೋಗಿ ಬಂದಿರುತ್ತಾಳೆ. ನಾನು ಯಾವತ್ತು ಯಮನಾಪೂರದ ನಮ್ಮ ಮಗಳ ಮನೆಗೆ ಹೋಗಿಲ್ಲ. ಆರೋಪಿಯು ಒಮ್ಮೆ ನಮ್ಮ ಮನೆಗೆ ಬಂದಾಗ ನಾನು ಆತನನ್ನು ನೋಡಿರುತ್ತೇನೆ.

8. ನಾನು ಪಿಜಿಯೋತೆರಪಿ ಚಿಕಿತ್ಸೆ ಪಡೆಯಲು ಜೀಮ್ ಬಳಿ ಇರುವ ಡಾಕ್ಟರ ಹತ್ತಿರ ಹೋಗಿದ್ದೇನು. ಆ ಡಾಕ್ಟರ ಹೆಸರು ನನಗೆ ಗೊತ್ತಿಲ್ಲ. ಈ ರೀತಿ ನಾನು ಹೋಗಿದ್ದು, ದಿಃ 28.08.2023 ರಂದು. ನನಗೆ ಜೀಮ್ ನ ಹೆಸರು ಮತ್ತು ಆಸ್ಪತ್ರೆಯ ಹೆಸರು ಗೊತ್ತಿಲ್ಲ. ಅದು ನನ್ನ ಮಗನ ಸ್ನೇಹಿತನ ಜೀಮ್ ಆಗಿದೆ. ನಾನು ಆ ದಿನ ಪಿಜಿಯೋತೆರಪಿ ಚಿಕಿತ್ಸೆ ಪಡೆಯಲು ಡಾಕ್ಟರ ಬಳಿ ಹೋಗಿಲ್ಲ ಎನ್ನುವುದು ನಿಜವಲ್ಲ. ಆ ಬಳಿಕ ನಾನು ಆ ದಿನ ಬೆಳಿಗ್ಗೆ 9-00 ಗಂಟೆಗೆ ಮಗಳ ಮನೆಗೆ ಹೋಗಿದ್ದೇನು. ಈ ವಿಚಾರವನ್ನು ನಾನು ಪಿರ್ಯಾದಿಯಲ್ಲಿ ಬರೆಸಿಲ್ಲ ಎನ್ನುವುದು ನಿಜವಲ್ಲ. ಆ ದಿನ ನಾನು ಮಗಳ ಮನೆಗೆ ಹೋದಾಗ ಅಲ್ಲಿ ಆರೋಪಿ ಇದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಾವು ಆ ಕಾಲಕ್ಕೆ

ಅವರಿಬ್ಬರಿಗೂ ಕೂಡ ತಾಕಿತು ಮಾಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

9. ಘಟನೆಯ ದಿನ ಬೆಳಿಗ್ಗೆ 9-00 ಗಂಟೆಗೆ ನಮ್ಮ ಮಗಳು ನಮ್ಮ ಮನೆಯಿಂದ ಬಟ್ಟೆ ಅಂಗಡಿಯ ಕೆಲಸಕ್ಕೆ ಹೋಗಿದ್ದಳು. ನಮ್ಮ ಮನೆಯಿಂದ ಆ ಬಟ್ಟೆ ಅಂಗಡಿ ಸುಮಾರು 4-5 ಕಿ. ಮೀ. ದೂರದಲ್ಲಿದೆ. ಆ ದಿನ ನನ್ನ ಮಗಳು ಬಟ್ಟೆ ಅಂಗಡಿಯ ಕೆಲಸಕ್ಕೆ ಹೋಗಿಯೇ ಇಲ್ಲ ಎನ್ನುವುದು ನಿಜವಲ್ಲ. ಆ ದಿನ ನನ್ನ ಮಗಳು ಕೆಲಸಕ್ಕೆ ಹೋದವಳು ವಾಪಸ್ಸು ನಮ್ಮ ಮನೆಗೆ ಬಂದಿರಲಿಲ್ಲ. ಆ ದಿನ ರಾತ್ರಿ 9-30 ಗಂಟೆಗೆ ನನ್ನ ಮಗಳು ನನ್ನ ಗಂಡನಿಗೆ ಪೋನ್ ಮಾಡಿದ್ದಳು. ನನ್ನ ಮಗಳು ನನ್ನ ಗಂಡನ ಬಳಿ ಆಕೆಯ ಮಕ್ಕಳನ್ನು ತಂದು ಪೆಟ್ರೋಲ್ ಬಂಕಿನ ಬಳಿ ಬಿಡು ಮತ್ತು ನಾನು ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದಳು. ಈ ರೀತಿ ಪೋನ್ ಮಾಡಿದ ವಿಚಾರ ನನಗೆ ಸ್ವಂತ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಆಗ ನಾನು ಮನೆಯಲ್ಲಿಯೇ ಇದ್ದೇ ಎನ್ನುತ್ತಾರೆ. ನಾನು ಆಗ ರಾತ್ರಿ ನನ್ನ ಮಗಳೊಂದಿಗೆ ಪೋನಿನಲ್ಲಿ ಮಾತನಾಡಿಲ್ಲ. ಆ ದಿನ ರಾತ್ರಿ ನನ್ನ ಮಗಳು ನನ್ನ ಗಂಡನೊಂದಿಗೆ ಸುಮಾರು 10-15 ನಿಮಿಷ ಮಾತನಾಡಿದ್ದಾಳೆ. ನಾವು ನಮ್ಮ ಮಗಳ ಮಕ್ಕಳನ್ನು ಆ ದಿನ ರಾತ್ರಿ ಕಳುಹಿಕೊಟ್ಟಿರಲಿಲ್ಲ ಎನ್ನುವುದು ನಿಜ. ಆ ದಿನ ರಾತ್ರಿ ಆರೋಪಿಯು ನನ್ನ ಮಗಳಿಗೆ ಪೋನ್ ಮಾಡೇ ಇಲ್ಲ ಎಂದರೆ ಸಾಕ್ಷಿ ಆ ವಿಚಾರ ನಮಗೆ ಆ ರಾತ್ರಿ ತಿಳಿದಿರಲಿಲ್ಲ ಮತ್ತು ದಿಃ 09.09.2023 ರಂದು ತಿಳಿಯಿತು ಎನ್ನುತ್ತಾರೆ. ನಾವು ಆ ದಿನ ಆ ಮನೆಗೆ ಹೋದಾಗ ಅಕ್ಕ ಪಕ್ಕದವರು ನಮಗೆ ಈ ರೀತಿ ಆರೋಪಿ ಮತ್ತು ನಮ್ಮ ಮಗಳ ನಡುವೆ ಪೋನನಲ್ಲಿ ಮಾತುಕತೆಯಾಗಿರುವ ವಿಚಾರ ತಿಳಿಯಿತು. ನನ್ನ ಮಗಳು ಪೋನಿನಲ್ಲಿ ಮಾತನಾಡಿದ್ದು, ಈ ಆರೋಪಿಯೊಂದಿಗೆ ಎಂದು ನನಗೆ ಮುಂದೆ ಪೋಲಿಸ ಠಾಣೆಗೆ ಹೋದಾಗ ತಿಳಿಯಿತು. ನನ್ನ ಮಗಳು ಬಾಡಿಗೆಗೆ ಇದ್ದ ಮನೆಯ ಆಜುಬಾಜುದವರ ಹೆಸರು ನನಗೆ ಗೊತ್ತಿಲ್ಲ. ಪೋಲಿಸ ಠಾಣೆಯಲ್ಲಿ ಪೋಲಿಸರು ಚಾಸಾ-8 ರವರನ್ನು ಕರೆಸಿದ್ದು,

ಅವರನ್ನು ವಿಚಾರಿಸಿದಾಗ ಆ ದಿನ ರಾತ್ರಿ ನನ್ನ ಮಗಳು ಮತ್ತು ಆರೋಪಿಯ ನಡುವೆ ಪೋನಿನಲ್ಲಿ ಜಗಳವಾಗಿರುವುದು ತಿಳಿಯಿತು. ರವಿ ಎನ್ನುವ ಬಟ್ಟೆ ಅಂಗಡಿಯ ಕೆಲಸದವ ಅಂಗಡಿ ಮಾಲೀಕರಿಗೆ ಹೇಳಿದ್ದರಿಂದ ಈ ವಿಷಯ ಚಾಸಾ-8 ರವರಿಗೆ ತಿಳಿಯಿತು. ಈ ವಿಚಾರ ಎಲ್ಲವು ಸುಳ್ಳು ಎನ್ನುವುದು ನಿಜವಲ್ಲ. ಈ ಎಲ್ಲಾ ವಿಚಾರವನ್ನು ನಾನು ಪಿರ್ಯಾದಿಯಲ್ಲಿ ಬರೆಸಿಲ್ಲ ಎನ್ನುವುದು ನಿಜವಲ್ಲ.

10. ಘಟನೆಯ ದಿನ ರಾತ್ರಿ 11-00 ಗಂಟೆಗೆ ನಾನು ಘಟನಾ ಸ್ಥಳಕ್ಕೆ ಹೋಗಿದ್ದೇನು. ನಾನು ನನ್ನ ಮಗಳ ಮನೆಗೆ ಮೊದಲನೇ ಬಾರಿಗೆ ಹೋಗಿದ್ದು, ದಿಃ 28.08.2023 ರಂದು. ನಾನು ನನ್ನ ಮಗಳು ಬಾಡಿಗೆಗೆ ಇದ್ದ ಮನೆಯನ್ನು ಸಂಪೂರ್ಣವಾಗಿ ನೋಡಿದ್ದೇನೆ. ಆಕೆಯ ಮನೆ ಯಾವ ದಿಕ್ಕಿಗೆ ಮುಖ ಮಾಡಿಕೊಂಡಿದೆ ಎಂದು ನನಗೆ ಹೇಳಲಾಗುವುದಿಲ್ಲ. ಆ ಮನೆಯಲ್ಲಿ 2 ಕೋಣೆಗಳಿದ್ದವು. ಆ ಮನೆಗೆ 2 ಬಾಗಿಲು ಮತ್ತು 2 ಕಿಟಕಿಗಳು ಇದ್ದವು. ಆ ಮನೆಯ ಬಾಗಿಲುಗಳು ಯಾವ ದಿಕ್ಕಿಗೆ ಇದ್ದವು ಎಂದು ನನಗೆ ಹೇಳಲಾಗುವುದಿಲ್ಲ. ನಾನು ಅಡುಗೆ ಕೋಣೆಯ ಕಿಟಕಿಯ ಮೂಲಕ ನೋಡಿದಾಗ ನನ್ನ ಮಗಳು ನೇಣು ಹಾಕಿದ್ದು ಕಂಡು ಬಂತು. ಆ ಕಿಟಕಿಗೆ ಬಾಗಿಲು ಇದ್ದವು. ಆ ಬಾಗಿಲು ಯಾವ ಬಣ್ಣದ್ದು ಎಂದು ನನಗೆ ಹೇಳಲಾಗುವುದಿಲ್ಲ. ಚಾಸಾ-2 ರವರು ನಮಗೆ ರಾತ್ರಿ 10-45 ಗಂಟೆಗೆ ಪೋನ್ ಮಾಡಿ ನಮ್ಮ ಮಗಳು ನೇಣು ಹಾಕಿದ ವಿಷಯವನ್ನು ತಿಳಿಸಿದ್ದರು. ನಮ್ಮ ಮನೆಯಿಂದ ನಮ್ಮ ಮಗಳು ಬಾಡಿಗೆಗೆ ಇದ್ದ ಮನೆಗೆ ವಾಹನದ ಮೂಲಕ 2-3 ನಿಮಿಷದಲ್ಲಿ ತಲುಪಬಹುದು. ಆ ಮನೆಯ ಅಕ್ಕಪಕ್ಕದವರು ನನ್ನ ಮಗಳು ಪೋನಿನಲ್ಲಿ ಯಾರ ಹತ್ತಿರ ಮಾತನಾಡುತ್ತಿದ್ದರು ಎಂದು ಹೇಳಿರಲಿಲ್ಲ. ನನ್ನ ಮಗಳು ಬೇರೆಯವರೊಂದಿಗೆ ಮಾತನಾಡುತ್ತಿದ್ದಳು ಮತ್ತು ಆ ವಿಚಾರವನ್ನು ನನಗೆ ಅಕ್ಕಪಕ್ಕದ ಮನೆಯವರು ತಿಳಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

11. ಮೊದಲು ನನ್ನ ಗಂಡ ಪೋಲಸ ಠಾಣೆಯಲ್ಲಿ ನನ್ನ ಮಗಳ ಸಾವಿನ ಬಗ್ಗೆ ನಮಗೆ ಯಾರ ಮೇಲೂ ಸಂಶಯ ಇಲ್ಲ ಎಂದು ಹೇಳಿಕೆ ಕೊಟ್ಟಿದ್ದಾರೆ ಎನ್ನುವುದು ನಿಜ. ಆರೋಪಿಯೇ ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ನಮ್ಮ ಮಗಳು ಫೋನ್ ಮಾಡಿ ಹೇಳಿದಾಗ ನಾವು ಆಕೆಯ ಮಕ್ಕಳನ್ನು ಕಳುಹಿಸಿ ಕೊಟ್ಟಿಲ್ಲ ಎನ್ನುವ ಕಾರಣಕ್ಕಾಗಿ ನಮ್ಮ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಳು ಎನ್ನುವುದು ನಿಜವಲ್ಲ.

12. ದಿಃ 10.09.2023 ರಂದು ಸಂಜೆ 5-00 ಗಂಟೆಗೆ ಪೋಲಿಸರು ಪಂಚನಾಮೆ ಮಾಡುವ ಸಲುವಾಗಿ ಬಂದಿದ್ದರು. ಆ ಪಂಚನಾಮೆ ಮಾಡುವ ಕಾಲಕ್ಕೆ ಪೋಲಿಸರು ಚಾಸಾ-2 ಮತ್ತು ಚಾಸಾ-4 ರವರನ್ನು ಅಲ್ಲಿಗೆ ಕರೆಸಿದ್ದರು. ಪೋಲಿಸರು ಅಮಾನತ್ತು ಪಡಿಸಿಕೊಂಡ ಓಡ್ನಿ ಹಸಿರು, ನೀಲಿ ಮತ್ತು ಇತರ ಎಲ್ಲಾ ಬಣ್ಣದಿತ್ತು. ನನ್ನ ಮಗಳ ಬಲಗೈಯಲ್ಲಿ ಟ್ಯಾಟೋ ಇತ್ತು. ಪಂಚನಾಮೆಯನ್ನು ಸುಮಾರು 1 ತಾಸಿನ ಅವಧಿಯಲ್ಲಿ ಬರೆದಿದ್ದರು. ಪೋಲಿಸರು ಪಂಚನಾಮೆಯನ್ನು ಸ್ಥಳದಲ್ಲಿಯೇ ಮಾಡಿದ್ದರು. ನಾನು ಸ್ಥಳದಲ್ಲಿಯೇ ಸಹಿ ಮಾಡಿದ್ದೆ. ನಾನು ಪೋಲಿಸ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೆ ಎನ್ನುವುದು ನಿಜವಲ್ಲ. ಆರೋಪಿಯ ವಿರುದ್ದ ಸುಳ್ಳು ಆರೋಪ ಹೋರಿಸಿ ನಾನು ಪಿರ್ಯಾದಿಯನ್ನು ಕೊಟ್ಟಿದ್ದೇನು ಎನ್ನುವುದು ನಿಜವಲ್ಲ.

**SC No.39 /2024**
**PW-1**
**CW-1**

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.